ಮಾತನಾಡಿರಬಹುದೇ ಹೊರತು ವೈಯಕ್ತಿಕವಾಗಿ ನಾನು ಯಾರ ಮೇಲೂ ನನಗೆ ತಿಳಿದಂತೆ ನಾನು ಆಪಾದನೆ ಮಾಡಿಲ್ಲ, ಮುಂದೆ ಮಾಡುವುದಕ್ಕೂ ಹೋಗುವುದಿಲ್ಲ. ಆದರೆ, ನನ್ನ ಹೆಸರು ಬಂದಿರುವುದರಿಂದ ನಾನು ಸಿಎನ್ಎನ್ ನೋಡಿದ್ದೇನೆ, ಉದಯ ಚಾನೆಲ್ ನೋಡಿದ್ದೇನೆ, ಎಲ್ಲಾ ಚಾನೆಲ್‌ಗಳನ್ನೂ ನೋಡಿದ್ದೇನೆ. ನನ್ನ ಹೆಸರು ಎಲ್ಲಿಯೂ ಪ್ರಸ್ತಾಪವಾಗಿಲ್ಲ. ಯಾವ ಇಂಟೆನ್‌ಶನ್‌ನಲ್ಲಿ ನನ್ನ ಹೆಸರನ್ನು ಸೇರಿಸಿದ್ದಾರೋ! ಆದರೂ ಪರವಾಗಿಲ್ಲ. ನನ್ನ ಮನಸ್ಸಿಗೆ ಮೊದಲನೇ ಬಾರಿ ನೋವಾಗಿದೆ. ಯಾವುದೇ ದಾಖಲೆಯಲ್ಲಿ ನನ್ನ ಹೆಸರು ಬರುತ್ತಿರತಕ್ಕಂಥಾದ್ದು ಅಲಿಗೇಶನ್ ಬರುತ್ತಿರತಕ್ಕಂಥಾದ್ದು ನನಗೆ ನೋವು ತಂದಿದೆ. ಆದರೂ ನಾನು ಆ ಭಾಗದ ಶಾಸಕನಾಗಿ ನನ್ನ ಕರ್ತವ್ಯವಿದೆ. ಸರ್ಕಾರದ ಪರವಾಗಿ ಏನು ಸ್ಟೇಟಸ್ ಇದೆಯಂದು ತಿಳಿಸುವುದು ನನ್ನ ಕರ್ತವ್ಯವೆಂದು ತಿಳಿದುಕೊಂಡು ನಾನು ಹೇಳುತ್ತಿದ್ದೇನೆ.

ಬೆಂಗಳೂರು ಯೂನಿವರ್ಸಿಟಿಯಿಂದ ಐದು ಕಿಲೋಮೀಟರ್, ಅದು ಸರಿಯಲ್ಲ ಕನಕಪುರ ರೋಡ್ ಉತ್ತರಹಳ್ಳಿ ಹೋಬಳಿ, ಮನವರ್ತೆ ಕಾವಲು ಎಂದು ಹೆಸರು ಇದೆ. ಸರ್ವೆ ನಂಬರ್ 5, ಸುಮಾರು 348 ಎಕರೆ. ಇಷ್ಟು ಎಕರೆಗಳುಳ್ಳ ಭೋವಿ ಕಾಲೋನಿಯಲ್ಲಿ ಸುಮಾರು 50–60 ವರ್ಷಗಳಿಗೂ ಮೇಲ್ಪಟ್ಟು ಒಂದಿಬ್ಬರು ಭೋವಿಗಳಿದ್ದರು. ಇವ್ವೊತ್ತು ಸುಮಾರು 30 ಭೋವಿಗಳು ಅಲ್ಲಿರಬಹುದು. ಅವರು ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ. ಅನಂತರ ಇವ್ವೊತ್ತು ಸಿಎನ್ಎನ್‌ರವರು ಚಾನೆಲ್‌ನಲ್ಲಿ ಏನು ಅವರಿಗೆ ಹೇಳಿದರು, ಅವರಿಗೆ ಗೊತ್ತಿದೆಯೋ, ಏನೋ, ಗೊತ್ತಿಲ್ಲ. ಇದು ಫಾರೆಸ್ಟ್ ಲ್ಯಾಂಡ್ ಎಂದು ಹೇಳಿದ್ದಾರೆ. ಸಿಎನ್ಎನ್ ಚಾನೆಲ್‌ಗೆ ಅದರ ಬಗ್ಗೆ ಯಾರು ಕೊಟ್ಟರೋ ಮಹಾನುಭಾವರು! ಅದನ್ನು ಫಾರೆಸ್ಟ್ ಲ್ಯಾಂಡ್ ಎಂದು ಹೇಳಿದ್ದಾರೆ. ಆದರೆ, ನಾನು ಹೇಳುತ್ತಿದ್ದೇನೆಃ ಅಲ್ಲಿ ವಾಸ ಮಾಡುತ್ತಿರುವ ಭೋವಿ ಜನಾಂಗದವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಶನ್ ಹಾಕಿದ್ದಾರೆ. ನಾನು ರಿಟ್ ಪಿಟಿಶನ್ ನಂಬರ್ ಸಹ ಕೊಡುತ್ತೇನೆ. 2001 ಮತ್ತು 2002ರಲ್ಲಿ ರಿಟ್ ಪಿಟಿಶನ್ ಹಾಕಿದ್ದಾರೆ. ಆ ರಿಟ್ ಪಿಟಿಶನ್‌ಗೆ ಹೈಕೋರ್ಟ್ ಆದೇಶ ಮಾಡಿದೆ. ಇದು ಫಾರೆಸ್ಟ್ ಲ್ಯಾಂಡ್ ಎನ್ನುವುದಕ್ಕೆ ದಾಖಲೆ ಕೊಡಿ ಎಂದು ನಾವು ಪದೇ ಪದೇ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಅವರನ್ನು ಕೇಳಿದರೂ ಸಹ 'ಇದು ಫಾರೆಸ್ಟ್ ಲ್ಯಾಂಡ್' ಎನ್ನುವ ಹೇಳಿಕೆಗೆ ನಮಗೆ ಸರಿಯಾದ ದಾಖಲೆ ಕೊಡದೇ ಇರುವುದರಿಂದ ನಾವು ಇದು ಫಾರೆಸ್ಟ್ ಲ್ಯಾಂಡ್ ಅಲ್ಲ, ಇದನ್ನು 'ಡಿ' ಕೆಟಗರಿ ಲ್ಯಾಂಡ್, ಅಂದರೆ, ಮಂಜೂರು ಮಾಡುವ ಲ್ಯಾಂಡ್. ಇದನ್ನು ಅಲ್ಲಿ ಯಾವ ಭೋವಿ ಜನರಿದ್ದಾರೆ, ಅವರಿಗೆ ಗ್ರಾಂಟ್ ಮಾಡಿ ಎಂದು ಹೈಕೋರ್ಟ್ ಆದೇಶ ಮಾಡಿದೆ. ಅಲ್ಲಿಗೆ ಅದು ಹೊರಟು ಹೋಯಿತು. ಅದು ಫಾರೆಸ್ಟ್ ಲ್ಯಾಂಡ್ ಅಲ್ಲ. ಆದರೆ

ಇವೊತ್ತಿನವರೆಗೂ ಪಹಣಿಯಲ್ಲಿ ಅದು ಫಾರೆಸ್ಟ್ ಲ್ಯಾಂಡ್ ಎಂದೇ ಬರುತ್ತಿದೆ. ಅದಾದ ನಂತರ ನಾನು ನಿಮ್ಮ ವಿರುದ್ಧ ಮಾತನಾಡುತ್ತಿಲ್ಲ. ನಾನು ಕಾಂಗ್ರೆಸ್ ವಿರುದ್ಧವೂ ಮಾತನಾಡುತ್ತಿಲ್ಲ. ಏನು ಸ್ಟೇಟಸ್ ಇದೆಯೆಂದು ಹೇಳುತ್ತಿದ್ದೇನೆ. ದಯವಿಟ್ಟು ಎರಡು ನಿಮಿಷ ಅವಕಾಶ ಕೊಡಿ. ಅದನ್ನೆಲ್ಲವನ್ನೂ ಹೇಳಿಬಿಡುತ್ತೇನೆ. ಅನಂತರ, ಚರ್ಚೆಗೆ ಅವಕಾಶ ಮಾಡಿಕೊಡಲಿ.

ಅಧ್ಯಕ್ಷರು: ಮಾನ್ಯ ಅಶೋಕ್‌ರವರೆ, ದಯಮಾಡಿ ಕೇಳಿ, ಮಾನ್ಯ ಧರ್ಮಸಿಂಗ್‌ರವರು ಮತ್ತು ಅವರ ಸ್ನೇಹಿತರು ಸೂಚನೆಯನ್ನು ಕಳುಹಿಸಿಕೊಟ್ಟಿದ್ದಾರೆ. ನಿಯಮ 60ರ ಪ್ರಕಾರ ಕೊಡಬೇಕಾದರೆ, ಈ ಹೌಸ್ ಆರಂಭವಾಗುವುದಕ್ಕಿಂತಲೂ ಒಂದು ಗಂಟೆ ಮೊದಲು ಕೊಡಬೇಕಾಗಿತ್ತು. ಅದನ್ನು ಅವರು ಬೆಳಿಗ್ಗೆ 10.30 ಗಂಟೆಗೆ ಕೊಟ್ಟಿದ್ದಾರೆ. ಅಂದರೆ, ಅರ್ಧ ಗಂಟೆ ತಡವಾಗಿ ಕೊಟ್ಟಿದ್ದಾರೆ. ಇದು ನಿಯಮಾವಳಿಗೆ ವಿರುದ್ಧವಾಗಿದೆ. ಆದುದರಿಂದ, ನಾನು ಅವರ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದನ್ನು ತಳ್ಳಿಹಾಕಿದ್ದೇನೆ. ತಾವು ಕುಳಿತುಕೊಳ್ಳಿ. ಏಕೆ explanation? ಚರ್ಚೆಯಾದ ನಂತರ ತಾನೇ explanation.

ಶ್ರೀ ಎನ್. ಧರ್ಮಸಿಂಗ್: ಒಂದು ಗಂಟೆ ಮೊದಲೇ ಕೊಟ್ಟಿದ್ದೇನೆ. ಮಾನ್ಯ ಪ್ರಕಾಶ್‌ರವರೂ ಇದರ ಬಗ್ಗೆ ಹೇಳಿದ್ದಾರೆ.

ಅಧ್ಯಕ್ಷರು: ತಳ್ಳಿಹಾಕಿದ್ದೇನೆ. ನೀವು ಯಾವಾಗಲೋ ಕೊಟ್ಟರೆ ಏನು ಮಾಡುವುದಕ್ಕಾಗುತ್ತದೆ?

ಶ್ರೀ ಎನ್. ಧರ್ಮಸಿಂಗ್: ಹತ್ತು ಗಂಟೆಗೆ ನಾವು ಕೊಟ್ಟಿದ್ದೇವೆ.

ಅಧ್ಯಕ್ಷರು: ನಮಗೆ 10 ಗಂಟೆ 30 ನಿಮಿಷಕ್ಕೆ ಬಂದಿದೆ.

ಶ್ರೀ ಎನ್. ಧರ್ಮಸಿಂಗ್: ಏಕೆ ನೀವು ಕೊನೆ ಕೊನೆಗೆ ಸಾಯಂಕಾಲ ಈ ತರಹ.....

ಅಧ್ಯಕ್ಷರು: ಇದು ಇರತಕ್ಕಂಥ ವಿಚಾರ. ಸಾಯಂಕಾಲ ಎಂದರೆ, ಏನೂ ಇಲ್ಲದೇ ಇರುವುದನ್ನು ಮಾಡುವುದಕ್ಕಾಗುತ್ತದೆಯೇ?

ಶ್ರೀ ಜೆ.ಸಿ. ಮಾಧುಸ್ವಾಮಿ: ತಾವು ಈ ಸಭೆ ಕರೆಯಬೇಕಾದರೆ ಬಿಎಸಿಯಲ್ಲಿ....

ಶ್ರೀ ವೈಜನಾಥ ಪಾಟೀಲ್: ಮಾನ್ಯ ಅಧ್ಯಕ್ಷರೆ, ದಯಮಾಡಿ ಮುಂಜಾನೆಯಿಂದಲೂ....

ಅಧ್ಯಕ್ಷರು: ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ? ಯಾರಾದರೂ ಒಬ್ಬರು ಮಾತನಾಡಿ.

ಶ್ರೀ ವೈಜನಾಥ ಪಾಟೀಲ್: ನಾನು ನೋಡುತ್ತಿದ್ದೇನೆ. ಬೆಳಿಗ್ಗೆಯಿಂದ ಹತ್ತತ್ತು ಸಲ ಅವರೇ ಎದ್ದು ನಿಂತುಕೊಳ್ಳುತ್ತಿದ್ದಾರೆ. ನಾವು ಒಂದೇ ಸಲ ಎದ್ದು

ನಿಂತಿದ್ದೇವೆ. ಒಂದೇ ಪ್ರಶ್ನೆ ಕೇಳುತ್ತೇನೆ. ಅದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕು. ಸಿ.ಡಿ.ಯಲ್ಲಾಗಲಿ ಫೋಟೋದಲ್ಲಾಗಲಿ ಎಲ್ಲಿಯಾದರೂ ಅದರ ಬಗ್ಗೆ ಟೆಸ್ಟ್ ಮಾಡುವುದಕ್ಕೆ ತಯಾರಿದ್ದೀರಾ? ಹೇಗೆ? ಇದಕ್ಕೆ ಸರ್ಕಾರ ಉತ್ತರ ಕೊಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ವೈಜನಾಥ ಪಾಟೀಲರೆ, ಅದು ಬೇಡ. ಬೆಳಗಾಂನಲ್ಲಿ ವಿಧಾನಸಭೆ ಕರೆದು ಕಾಲಹರಣವಾಗಿದೆ. ಯಾವುದೇ ಪುರುಷಾರ್ಥ ಸಾಧನೆಯಾಗಲಿಲ್ಲವೆಂದು ತಮಗೆ ತಿಳಿಸಿ, ನಾವು ಸಭೆಯಿಂದ ಹೊರಗಡೆ ಹೋಗುತ್ತಿದ್ದೇವೆ.

(ಮಾನ್ಯ ಸದಸ್ಯರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಸದನದಿಂದ ಹೊರ ನಡೆದರು)

ಶ್ರೀ ವಾಟಾಳ್ ನಾಗರಾಜ್: ಯಾವ ಉದ್ದೇಶಕ್ಕೋಸ್ಕರವಾಗಿ ಈ ಸಭೆ ಕರೆಯಲಾಗಿತ್ತೋ, ಆ ಉದ್ದೇಶ ಈಡೇರುತ್ತಿಲ್ಲ. ಅದರ ಬಗ್ಗೆ ಬಹಳ ನೋವಾಗಿದೆ. ಇದು ಒಳ್ಳೆಯ ಸಂಪ್ರದಾಯವಲ್ಲ. ನಾನು ನೋವಿನಿಂದ ಹೊರಗಡೆ ಹೋಗುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದಿಂದ ಹೊರ ನಡೆದರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಯಾವ ಉದ್ದೇಶಕ್ಕೋಸ್ಕರ ಸದನ ಕರೆಸಿದಿರೋ, ಆ ಉದ್ದೇಶ ಇಲ್ಲಿ ನೆರವೇರಲಿಲ್ಲ, ಸಫಲವಾಗಲಿಲ್ಲ, ಆದ್ದರಿಂದ, ಅನಾವಶ್ಯಕವಾಗಿ ಕಾಲಹರಣವಾಗಿದೆ. ಇದನ್ನು ಪ್ರತಿಭಟಿಸಿ ನಾವು ಹೊರಗಡೆ ಹೋಗುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ಜಿ.ವಿ. ಶ್ರೀರಾಮರೆಡ್ಡಿಯವರು ಸದನದಿಂದ ಹೊರ ನಡೆದರು)

ಶ್ರೀ ಎಸ್. ರಾಜೇಂದ್ರನ್: ಗಡಿನಾಡಿನ ಅಭಿವೃದ್ಧಿ ಬಗ್ಗೆ ಮಾತನಾಡಬೇಕು, ಬೆಳಗಾವಿ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಮಾತನಾಡಬೇಕು, ಆದರೆ, ಇಲ್ಲಿ ಏನೂ ಇಲ್ಲ....

(ಮಾನ್ಯ ಸದಸ್ಯರಾದ ಶ್ರೀ ಎಸ್. ರಾಜೇಂದ್ರನ್‌ರವರು ಸದನದಿಂದ ಹೊರ ನಡೆದರು)

ಶ್ರೀ ವೈಜನಾಥ ಪಾಟೀಲ್: ನಮ್ಮ ಪ್ರಶ್ನೆಗೆ ಗೃಹ ಮಂತ್ರಿಗಳು ಉತ್ತರ ಕೊಡುತ್ತಿಲ್ಲ.

ಅಧ್ಯಕ್ಷರು: ತಾವು ಕುಳಿತುಕೊಳ್ಳಿ. ಮತ್ತೆ ಮತ್ತೆ ಏಕೆ ಹೀಗೆ ಮಾಡುತ್ತೀರಿ?

ಶ್ರೀ ವೈಜನಾಥ ಪಾಟೀಲ್: ನನ್ನ ಒಂದು ಪ್ರಶ್ನೆಗೆ ಮಾನ್ಯ ಗೃಹಮಂತ್ರಿಗಳು ಕ್ಲಾರಿಫಿಕೇಶನ್ ಕೊಡಬೇಕೆಂದು ಅಷ್ಟೇ ನಾನು ಕೇಳುತ್ತಿದ್ದೇನೆ.

5.30 P.M.

ಅಧ್ಯಕ್ಷರು: ಅದೇನೋ ಕ್ಲಾರಿಫಿಕೇಶನ್ ಅಂತೆ, ನೀವು ಕೊಡಿ. ಇಲ್ಲದಿದ್ದರೆ, ವೈಜನಾಥ ಪಾಟೀಲರು ಸುಮ್ಮನೆ ಕೂರುವುದಿಲ್ಲ. ಅವರನ್ನು ಹೊರಗಡೆ ಕಳುಹಿಸುವುದಕ್ಕೂ ಆಗುವುದಿಲ್ಲ. ಒಳಗಡೆಯೂ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಹಾಗಾಗಿದೆ ಇವರ ಕತೆ. ದಯಮಾಡಿ ಕೇಳಿ.

ಶ್ರೀ ವೈಜನಾಥ ಪಾಟೀಲ್: ನಾನು ಕ್ಲಾರಿಫಿಕೇಶನ್ ಕೇಳುತ್ತಿದ್ದೇನೆ. ಸಿ.ಡಿ.ಯಾಗಲಿ ಅಥವಾ ಫೋಟೋ ಆಗಲಿ, ಅದರ ಬಗ್ಗೆ ಮುಂಜಾನೆಯಿಂದಲೂ ಸಾಕಷ್ಟು ಚರ್ಚೆಯಾಯಿತು. ಆದರೆ, ಕೊನೆಗೆ ರಿಸಲ್ಟ್ ಏನು? ಈಗ ಸಿ.ಡಿ. ನಕಲಿ ಇದೆಯೇ? ಅಥವಾ ಅಸಲಿ ಇದೆಯೇ? ನಮಗೆ ಗೊತ್ತಿಲ್ಲ. ಫೋಟೋ ಸಹ ಅಸಲಿಯೇ? ನಕಲಿಯೇ? ನಮಗೆ ಗೊತ್ತಿಲ್ಲ. ಇದಕ್ಕೆ ಸೈಂಟಿಫಿಕ್ ಆಗಿ ಕೆಮಿಕಲ್ ಟೆಸ್ಟ್‌ನಿಂದ ಸತ್ಯ ಹೊರಗಡೆ ಬರುವುದಕ್ಕೆ ಸಾಧ್ಯವಿದೆಯೇ? ಇಲ್ಲವೇ? ಕೇಳುತ್ತಿದ್ದೇನೆ. ಇದು ಸಾಧ್ಯತೆ ಇದ್ದರೆ, ಅದನ್ನು ಹೇಗೆ ಮಾಡಿಸುತ್ತಿರಿ ಎಂದು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಈ ವಿಷಯ ಪ್ರಸ್ತಾಪ ಮಾಡಿರುವ ಹಿರಿಯರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ವಿಷಯವನ್ನು ಮುಕ್ತಾಯಗೊಳಿಸಬೇಕೆಂದು ಸಂಪೂರ್ಣ ಸಹಕಾರ ಕೊಟ್ಟಿದ್ದಾರೆ. ಆ ವಿಚಾರದ ಬಗ್ಗೆ ಮಾನ್ಯ ಸದಸ್ಯರಾದ ಎಂ.ಪಿ. ವೆಂಕಟೇಶ್‌ರವರು ಸದನಕ್ಕೆ ಹೇಳಿದ ನಂತರ ಅದು ಮುಕ್ತಾಯವಾಗಿದೆ. ಇದು ನಕಲಿಯೇ? ಅಥವಾ ನೈಜವಾದದ್ದೇ? ಎಂದು ಯೋಚನೆ ಮಾಡಬೇಕಾಗಿದ್ದರೆ, ಅದಕ್ಕೆ ಬೇರೆ ಮಾರ್ಗಗಳಿರುತ್ತವೆ. ಆ ಪರ್ಯಾಯ ಮಾರ್ಗಗಳನ್ನೂ ಕೂಡ ತಾವು ಯೋಚನೆ ಮಾಡಿ ಎಂದು ಹೇಳಿದ್ದೇವೆ. ಅದೇ ರೀತಿಯಾಗಿ ಮಾನ್ಯ ಸ್ಪೀಕರ್‌ರವರು ಅದರ ಬಗ್ಗೆ ಯೋಚನೆ ಮಾಡಿ, ನಿರ್ಧರಿಸಿ ತಮ್ಮ ಮೂಲಗಳಿಂದ ಇದರ ಬಗ್ಗೆ ತಿಳಿದುಕೊಳ್ಳಿ ಎನ್ನತಕ್ಕಂಥ ಮಾತುಗಳನ್ನೂ ಹೇಳಿದ್ದೇವೆ. ಈಗ ಈ ವಿಚಾರ ಮುಕ್ತಾಯವಾಗಿದೆ. ಈ ವಿಚಾರದಲ್ಲಿ ಮತ್ತೆ ಪ್ರಶ್ನೆ ಮಾಡಬೇಕಾದ್ದಿಲ್ಲ. 60ರ ನಿಯಮಾವಳಿ ಬಗ್ಗೆ ಕೂಡ ಮಾನ್ಯ ಸ್ಪೀಕರ್‌ರವರು ಹೇಳಿದ ನಂತರ ಅದೂ ಕೂಡ ಮುಕ್ತಾಯವಾಗಿದೆ. ಈಗ ಇರತಕ್ಕಂಥಾದ್ದು ನಮ್ಮ ಇವೊತ್ತಿನ ದೈನಂದಿನ ಕಾರ್ಯಕ್ರಮಗಳು, ಮಸೂದೆ ಮತ್ತು ಬರಗಾಲದ ಬಗ್ಗೆ ಚರ್ಚೆ ಮಾಡತಕ್ಕಂಥಾದ್ದು.

ಅಧ್ಯಕ್ಷರು: ಮಾನ್ಯ ಪ್ರಕಾಶ್‌ರವರೆ, ಮೂರನೆಯದಾಗಿ, ನಮ್ಮ ಕಾರ್ಯಕ್ರಮ ಪಟ್ಟಿಯಲ್ಲಿ ಶಾಸನ ರಚನೆ ಎಂದು ಇದೆ. ಆದರೆ, ನಾಲ್ಕನೆಯದಾಗಿ, ನಿಯಮ 69ರ ಬರಗಾಲದ ಚರ್ಚೆ ಇದೆ. ಈಗ ಬಹಳ ಸದಸ್ಯರು ಬರಗಾಲದ ಬಗ್ಗೆ ಮತ್ತು ಅದರ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕೆಂದು ಇಲ್ಲಿ ಧರಣಿ ಮಾಡುವುದಕ್ಕೆ

ಬಂದಿದ್ದು, ಎಲ್ಲಾ ನಡೆದಿದೆ. ಆದುದರಿಂದ, ಯಾವುದನ್ನು ಮೊದಲು ತೆಗೆದುಕೊಳ್ಳೋಣವೆಂದು ತಾವು ಹೇಳಿ. ಯಾವುದಾದರೂ ಅಗತ್ಯವಾಗಿ ಆಗಲೇಬೇಕಾದ, ಪಾಸ್ ಆಗಲೇಬೇಕಾದ ಬಿಲ್ ಇದ್ದರೆ.... ಕೊನೆಯಲ್ಲಿ ನಾವು....

ಶ್ರೀ ಎಂ.ಪಿ. ಪ್ರಕಾಶ್: ತಾವು ಹೇಳಿದಂತೆ....

ಶ್ರೀ ಆರ್.ವಿ. ದೇಶಪಾಂಡೆ: ಬರಗಾಲದ ಬಗ್ಗೆ ಮೊದಲು ತೆಗೆದುಕೊಳ್ಳಿರೆಂದು ಅವರೇ ಹೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್: ಹಾಗೆ ಹೇಳಲಿಲ್ಲ. ಮಸೂದೆಗಳಿವೆ, ಬರಗಾಲದ ಬಗ್ಗೆಯೂ ಇದೆಯೆಂದು ಹೇಳಿದೆ. ಬಹಳ ಮುಖ್ಯವಾಗಿರತಕ್ಕ ಒಂದು ಮೆಸೇಜನ್ನು governor ರವರು ಕಳುಹಿಸಿಕೊಟ್ಟಿದ್ದಾರೆ. ಹಿಂದೆ ನಾವು ಲಾಭದಾಯಕ ಹುದ್ದೆಗಳ ವಿಚಾರದಲ್ಲಿ ಎರಡೂ ಸದನ ಪಾಸ್ ಮಾಡಿ ಕಳುಹಿಸಿರುವ ವಿಷಯದಲ್ಲಿ ರಾಜ್ಯಪಾಲರು ಒಂದು ಸಂದೇಶವನ್ನು ಉಭಯ ಸದನಕ್ಕೆ ಕಳುಹಿಸಿಕೊಟ್ಟಿದ್ದಾರೆ. ಈ ರೀತಿ ಕಳುಹಿಸಿಕೊಟ್ಟಿರುವ ಹಿನ್ನೆಲೆಯಲ್ಲಿ ಮತ್ತೆ ಪರ್ಯಾಲೋಚಿಸಬೇಕೆಂದು ನಾವು ಈವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿದೆ. ಆ ಕಾರಣಕ್ಕಾಗಿ ಮೊದಲು ಅದನ್ನು ಆಧ್ಯತೆಯ ಮೇಲೆ ತೆಗೆದುಕೊಂಡು ಅದಕ್ಕೆ ಎಲ್ಲಾ ನಮ್ಮ ಸದಸ್ಯ ಮಿತ್ರರನ್ನು ಕೇಳಿಕೊಳ್ಳುತ್ತಿದ್ದೇನೆ. ಬಹಳ ಮುಖ್ಯವಾಗಿರತಕ್ಕ ವಿಚಾರ ಅದು. ಲಾಭದಾಯಕ ಹುದ್ದೆ ಯಾವುದು ಎಂದು ಪರಿಗಣಿಸಬೇಕಾಗಿರತಕ್ಕ ಹಿನ್ನೆಲೆಯಲ್ಲಿ ನಾವು....

ಶ್ರೀ ವೈಜನಾಥ್ ಪಾಟೀಲ್: ನನ್ನ ಪ್ರಶ್ನೆಗೆ ಸಮರ್ಪಕವಾದ ಉತ್ತರ ಸರ್ಕಾರದಿಂದ ಸಿಕ್ಕದ ಕಾರಣ ನಾನು ಸಭೆಯಿಂದ ಹೊರಕ್ಕೆ ಹೋಗುತ್ತಿದ್ದೇನೆ.

(ಮಾನ್ಯ ವೈಜನಾಥ್ ಪಾಟೀಲ್‌ರವರು ಸಭೆಯಿಂದ ಹೊರಕ್ಕೆ ನಡೆದರು)

ಅಧ್ಯಕ್ಷರು: ತಾವು ಸಭೆಯಿಂದ ಹೊರಕ್ಕೆ ಹೋಗುವ ಉದ್ದೇಶದಿಂದ ಆ ಪ್ರಶ್ನೆ ಕೇಳುತ್ತಿರುವುದು.

9. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ವಿಧೇಯಕ, ಪ್ರವಾಹ ಬರಗಾಲ ಉತ್ತರ ಕರ್ನಾಟಕದ ಅಭಿವೃದ್ಧಿ ಇವುಗಳಲ್ಲಿ ಯಾವುದು ಚರ್ಚೆಯಾಗಬೇಕೆಂಬುದರ ಬಗ್ಗೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲ ಅನರ್ಹತೆ ತಡೆಗಟ್ಟುವ ತಿದ್ದುಪಡಿ ವಿಧೇಯಕ 2006ನ್ನು ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ರಾಜ್ಯಪಾಲರಿಂದ ಪುನರ್ಪರಿಗಣನೆಗೆ ಹಿಂದಿರುಗಿಸಲ್ಪಟ್ಟ 2006ನೇ ಸಾಲಿನ ಕರ್ನಾಟಕ ವಿಧಾನ ಮಂಡಲ ಅನರ್ಹತೆಯನ್ನು ತಡೆಗಟ್ಟುವ ತಿದ್ದುಪಡಿ ವಿಧೇಯಕವನ್ನು ತಾವು ಪರ್ಯಾಲೋಚನೆಗಾಗಿ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.